# ಪೊಲೀಸ್ ಇಲಾಖೆ

## ಪತ್ರಿಕಾ ಪ್ರಕಟಣೆ

## (ಕಲಬುರಗಿ ನಗರ ಪೊಲೀಸ್)

## ಸ್ಟೇಷನ್ ಬಜಾರ್ ಪೊಲೀಸರ ಯಶಸ್ವಿ ಕಾರ್ಯಾಚರಣೆ

ದಿನಾಂಕ:15-04-2022 ರಂದು ರಾತ್ರಿ 08-00 ಗಂಟೆಯಿಂದ ದಿನಾಂಕ :27-04-2022 ರಂದು ಬೆಳಗ್ಗೆ 07-00 ಗಂಟೆಯ ನಡುವೆ ಸಮಯದಲ್ಲಿ ನಿವೃತ್ತ ಪೊಲೀಸ್ ಕ್ಷೇಮಾಭಿವೃದ್ಧಿ ಸಂಘ ಕಟ್ಟಡ ಬಾಗಿಲ ಬೀಗವನ್ನು ಒಡೆದು 1 ಹೆಚ್.ಪಿ 3 ನೀರು ಎತ್ತುವ ಮೋಟಾರಗಳು ಹಾಗೂ 100 ಮೀಟರ ಕೇಬಲ್ ವೈರಗಳು ಅ.ಕಿ.5000/- ರೂ. ಮತ್ತು ಕಬ್ಬಿಣ ರಾಡ್ ರಿಂಗಗಳು ಕಳ್ಳತನ ಮಾಡಿದ ಬಗ್ಗೆ ಕನ್ನಾ ಕಳವು ಪ್ರಕರಣ ದಾಖಲಾಗಿರುತ್ತದೆ.

ದಿನಾಂಕ:09-06-2022 ರಂದು ಸದರಿ ಪ್ರಕರಣದಲ್ಲಿ ಆರೋಪಿ ಮತ್ತು ಮಾಲು ಪತ್ತೆಗಾಗಿ ವಿಶೇಷ ಕರ್ತವ್ಯಕ್ಕೆ ನೇಮಿಸಿದ ಸ್ಟೇಷನ ಬಜಾರ ಪೊಲೀಸ್ ಠಾಣೆಯ ಅಪರಾಧ ಪತ್ತೆದಳ ವಿಭಾಗದ ಸಿಬ್ಬಂದಿಯವರು ಹಾಗೂ ಪೊಲೀಸ್ ಇನ್ಸಪೆಕ್ಟರ್ ರವರು ಕಲಬುರಗಿ ನಗರದ ಮಾನ್ಯ ಪೊಲೀಸ್ ಆಯುಕ್ತರಾದ ಶ್ರೀ.ವೈ.ಎಸ್. ರವಿಕುಮಾರ ಐಪಿಎಸ್ ರವರ ನಿರ್ದೇಶನದ ಮೇರೆಗೆ ಉಪ ಪೊಲೀಸ್ ಆಯುಕ್ತರಾದ ಶ್ರೀಮಾನ್ಯ ಅಡ್ಡೂರ ಶ್ರೀನಿವಾಸಲು ಐ.ಪಿ.ಎಸ್ (ಕಾ ಮತ್ತು ಸು) ಹಾಗೂ ಅಪರಾಧ ಮತ್ತು ಸಂಚಾರ ವಿಭಾಗ ಉಪ ಪೊಲೀಸ್ ಆಯುಕ್ತರಾದ ಶ್ರೀಮಾನ್ಯ ಶ್ರೀಕಾಂತ ಕಟ್ಟಿಮನಿ ಮಾರ್ಗದರ್ಶನದಲ್ಲಿ ಹಾಗೂ ಮಾನ್ಯ ಸಹಾಯಕ ಪೊಲೀಸ್ ಆಯುಕ್ತರು (ದಕ್ಷಿಣ) ಉಪ-ವಿಭಾಗದ ಶ್ರೀ.ಎಸ್.ಬಿ. ಗಿರೀಶ್ ರವರುಗಳ ನೇತೃತ್ವದಲ್ಲಿ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸಪೆಕ್ಟರಾದ.ಶ್ರೀ.ಸಿದ್ಧರಾಮೇಶ್ವರ ಗಡೇದ ರವರು ಮತ್ತು ತಮ್ಮ ಠಾಣೆಯ ಸಿಬ್ಬಂದಿಯವರಾದ ನಜ್ಮುದ್ದೀನ್ ಎ.ಎಸ್.ಐ ದೇವೇಂದ್ರ, ಶಿವಾನಂದ ಫಿರೋಜ್, ಯೋಗೇಶ್, ಮೋಶಿನ್ ರವರುಗಳ ತಂಡ ಆರೋಪಿಯಾದ ಜಹೀರ ತಂದೆ ಇನಾಯಿತ ಅಲಿಶೇಖ ವಯಸ್ಸು 21 ವರ್ಷ ಉ:ಹಣ್ಣಿನ ವ್ಯಾಪಾರಿ ಸಾ: ಮಿಜಗುರಿ ಹತ್ತಿರ, ಮೋಮಿನಪುರ ಕಲಬುರಗಿ ನಗರ. ಇತನನ್ನು ದಸ್ತಗಿರಿ ಮಾಡಿ ಸದರಿ ಆರೋಪಿಯಿಂದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದ 1) 1 ಹೆಚ್.ಪಿ ಮೂರು ನೀರು ಎತ್ತುವ ಮೋಟಾರಗಳು ಅ.ಕಿ 12000/-ರೂ 2) 100 ಮೀಟರ ಕೇಬಲ್ ವೈರಗಳು ಅ.ಕಿ.5000/-ರೂ. ಹಾಗೂ 4 ದ್ವಿ ಚಕ್ರಗಳು ಅ.ಕಿ 100000/-ರೂ ಹೀಗೆ ಒಟ್ಟು 117000/- ಮೌಲ್ಯದ ಸ್ವತ್ತನ್ನು ಪತ್ತೆ ಹಚ್ಚಿರುತ್ತಾರೆ. ಸದರಿ ತಂಡಕ್ಕೆ ಮಾನ್ಯ ಪೊಲೀಸ್ ಆಯುಕ್ತರು ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ.